ಓ.ಎಸ್. ಸಂಖ್ಯೆ ಃ 52/2012

ದಿನಾಂಕ ಃ 30/08/2018
ಪಿ. ಡಬ್ಲ್ಯೂ. ಃ 3

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಃ 1 ಮತ್ತು 3 ನೇ ಪ್ರತಿವಾದಿ ಪರ ಶ್ರೀ. ಬಿ. ಹೆಚ್. ಎಸ್. ಅವರಿಂದ.

1. ನಾನು 1957 ನೇ ಇಸವಿಯಲ್ಲಿ ನೌಕರಿಗೆ ಸೇರಿದ್ದೆ. ಆಗ ನನಗೆ 19 ವರ್ಷ ಪ್ರಾಯ ಆಗಿತ್ತು. ಗಣಪತಿ ನನಗಿಂತ ಸುಮಾರು 15 ವರ್ಷ ನನಗಿಂತ ಪ್ರಾಯದಲ್ಲಿ ದೊಡ್ಡವರು ಇದ್ದರು. ಅವರು ಯಾವ ವರ್ಷ ತೀರಿಕೊಂಡರು ಎಂದು ಗೊತ್ತಿಲ್ಲ. ಸಂಬಾಜಿ ಅವರ ತೀರಿಕೊಂಡಾಗ ಅವರಿಗೆ 80 ವರ್ಷಕ್ಕಿಂತ ಕಡಿಮೆ ವಯಸ್ಸು ಆಗಿತ್ತು. ಸಂಬಾಜಿ ಅವರು ಬೀದರಗೆ ತಮ್ಮ ಮನೆಗೆ ಬರುತ್ತಿದ್ದರು. ವಾದಿಯ ತಂದೆ ತೀರಿಕೊಂಡ ನಂತರ ಈ ಕೇಸು ಸಲ್ಲಿಸುವವರೆಗೆ ಅವರು ಯಾವತ್ತೂ ಬೀದರಗೆ ಬಂದಿಲ್ಲ ಅಂದರೆ ಸುಳ್ಳು. ಅವರು ಬೆಂಗಳೂರಿನಲ್ಲಿ ವಾಸ ಇರುತ್ತಾರೆ ಅಂದರೆ ನಿಜ. ವಾದಿ, ವಾದಿಯ ತಂದೆ ಆಗಲಿ ಅಥವಾ ಅವರ ತಾಯಿಯಾಗಲಿ ಯಾವತ್ತೂ ದಾವಾ ಆಸ್ತಿಯ ಕೆಬ್ಜೆಯಲ್ಲಿ ಇರಲ್ಲಿಲ್ಲ ಮತ್ತು ವ್ಯವಸಾಯ ಮಾಡಿಲ್ಲ ಅಂದರೆ ಸರಿಯಲ್ಲ. ಗಣಪತಿ ಮತ್ತ ಸುಂದ್ರಮ್ಮಾ ಎತ್ತುಗಳು, ಎಮ್ಮೆಗಳು, ಮತ್ತು ವ್ಯವಸಾಯ ಮಾಡಲು ಉಪಯೋಗಿಸುವ ನೇಗಿಲು ಇತ್ಯಾದಿಗಳನ್ನು ಇಟ್ಟುಕೊಂಡಿದ್ದರು ಮತ್ತು ಅವುಗಳನ್ನು ನೋಡಿಕೊಳ್ಳಲು ಆಳುಗಳನ್ನು ಇಟ್ಟಿದ್ದರು ಅಂದರೆ ಅವರ ಮನೆಯಲ್ಲಿ ಎಮ್ಮೆ, ದನಗಳು ಇರಲಿಲ್ಲ ಅವರ ಮನೆಯಲ್ಲಿದ್ದ ಒಂದು ದನವನ್ನು ನಾನು ತೆಗೆದುಕೊಂಡು ಹೋಗಿದ್ದೆ. ಅವರು ಕೆಲಸದವರನ್ನು ಇಟ್ಟುಕೊಂಡು ವ್ಯವಸಾಯ ಮಾಡುತ್ತಿದ್ದರು ಅಂದರೆ ನಿಜ. ಆ ಜಮೀನನ್ನು ಅವರು ವ್ಯವಸಾಯ ಮಾಡುತ್ತಿದ್ದಾಗ ಭೂ ಸುಧಾರಣೆ ಕ್ಯಾಯ್ದೆ ಜಾರಿಗೆ ಬಂದಿತ್ತು ಅಂದರೆ ನಿಜ. ವಾದಿ ಆಗಲಿ ಅವರ ತಂದೆ, ತಾಯಿ ಆಗಲಿ ತಮಗೆ ಗೇಣಿ ಮಂಜೂರು ಮಾಡಬೇಕೆಂದು ಅರ್ಜಿ ಸಲ್ಲಿಸಿಲ್ಲ ಅಂದರೆ ಗೊತ್ತಿಲ್ಲ. ಅವರು ಕಬ್ಜೆಯಲ್ಲಿ ಇಲ್ಲದೆ ಇರುವ ಕಾರಣ ಭೂ ನ್ಯಾಯ ಮಂಡಳಿಯಲ್ಲಿ ಅರ್ಜಿ

ಸಲ್ಲಿಸಿಲ್ಲ ಎಂಬ ವಿಚಾರ ನನಗೆ ಗೊತ್ತಿದೆ ಅಂದರೆ ಗೊತ್ತಿಲ್ಲ.

2. ನಾನು ಪೋಲೀಸ ಇಲಾಖೆಯಲ್ಲಿ ಕಾನಸ್ಟೇಬಲ್ ಆಗಿ ಗುಲಬರ್ಗಾದಲ್ಲಿ ಕೆಲಸ ಮಾಡಿದ್ದೇನೆ. ನಾನು ಅಲ್ಲಿ 10 ವರ್ಷ ಕೆಲಸ ಮಾಡಿರುತ್ತೇನೆ. ನಂತರ ರಾಜಿನಾಮೆ ಕೊಟ್ಟು ವಾಪಸ್ಸು ಬೀದರಗೆ ಬಂದೆ. ಆನಂತರ ನಾನು ಬೇರೆ ಯಾವುದೇ ನೌಕರಿಗೆ ಸೇರಿರಲಿಲ್ಲ ಒಕ್ಕಲುತನ  ಮಾಡುತ್ತಿದ್ದೆ. ನಾನು ಕನ್ನಡ ಮಾಧ್ಯಮದಲ್ಲಿ 7 ನೇ ತರಗತಿವರೆಗೆ ಓದಿದ್ದೇನೆ. ನನ್ನ ಮುಖ್ಯ ವಿಚಾರಣೆಗಾಗಿ ಸಲ್ಲಿಸಿರುವ ಅಫಿಡೆವಿಟ್ ಇಂಗ್ಲೀಷ ಭಾಷೆಯಲ್ಲಿ ಇರುತ್ತದೆ.

3. ದಾವಾ ಆಸ್ತಿಗೆ ಗಣಪತಿ ಸಂಬಾಜಿ ಅವರು ಮಾಲೀಕರು ಇದ್ದರು ಎಂಬ ಬಗ್ಗೆ ನಾನು ದಾಖಲೆ ನೊಡಿಲ್ಲ. ವಾದಿ ಅರ್ಧ ದಾವಾ ಆಸ್ತಿಯ ಮಾಲೀಕರು ಇರುವ ಬಗ್ಗೆ ದಾಖಲೆ ನೋಡಿಲ್ಲ. ನಾನು ಚಿಕ್ಕಂದಿನಿಂದಲೂ ದಾವಾ ಆಸ್ತಿಯನ್ನು ನೋಡಿರುತ್ತೇನೆ. ಕಳೆದ 15 ವರ್ಷಳಿಂದ ನಾನು ದಾವಾ ಆಸ್ತಿಯ ಕಡೆಗೆ ಹೋಗಿಲ್ಲ. ದಾವಾ ಅಸ್ತಿಯನ್ನು ಯಾರು ವ್ಯವಸಾಯ ಮಾಡುತ್ತಿದ್ದರು ಮತ್ತು ಯಾರು ಉತ್ಪತ್ತಿ ತೆಗೆದುಕೊಳ್ಳುತ್ತಿದ್ದರು ಎಂದು ನನಗೆ ಗೊತ್ತಿಲ್ಲ, ಅಂದರೆ ಮೊದಲಿನ ವಿಷಯ ಗೊತ್ತಿತ್ತು ಅಂದರೆ ಈಗಿನ ವಿದ್ಯಾಮಾನ ಗೊತ್ತಿಲ್ಲ. ವಾದಿ ಸಂಬಾಜಿ ಅವರ ಮಗಳು ಇರುವುರಿಂದ ಅವರಿಗೆ ದಾವಾ ಆಸ್ತಿಯಲ್ಲಿ ಅರ್ಧ ಪಾಲು ಇರುತ್ತದೆ ಎಂದು ಹೇಳಿರುತ್ತೇನೆ ಅಂದರೆ ನಿಜ.

4. ನನಗೂ ಪ್ರತಿವಾದಿ ಸುಂದ್ರಮ್ಮನಿಗೂ ಆಗಿ ಬರುವುದಿಲ್ಲ ಅಂದರೆ ಸರಿಯಲ್ಲ. ನಾವು ಸಾಕಷ್ಟು ಸಲ ಜಗಳ ಮಾಡಿಕೊಂಡಿದ್ದೇವೆ ಅಂದರೆ ಸುಳ್ಳು. ವಾದಿಯ ಗಂಡ ನನಗೆ ಸಂಭಂದಿಕರು ಆಗಬೇಕು ಅಂದರೆ ವಾದಿಯವರ ಕಡೆಯಿಂದ ಸಂಭಂಧಿಕರು ಆಗಬೇಕು.  ವಾದಿಯ ಗಂಡ  ಯಾವ ಊರಿನವರು ಎಂದು ಮರೆತು ಹೋಗಿದೆ. ನಾನು ವಾದಿಗೆ ದಾವಾ ಆಸ್ತಿಯ ಮೇಲೆ ಕೇಸು ಮಾಡಲು ಹೇಳಿರುತ್ತೇನೆ

ಅಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯ ಗೇಣಿ ಹಕ್ಕು ಸುಂದ್ರಮ್ಮ ನವರಿಗೆ ಮಂಜೂರು ಆದ ವಿಷಯ ಮತ್ತು ವಾದಿಗೆ ದಾವಾ ಆಸ್ತಿಯಲ್ಲಿ ಏನೂ ಹಕ್ಕಿಲ್ಲ ಎಂದು ಗೊತ್ತಿದ್ದರು ಸಹ ಪ್ರತಿವಾದಿಯರಿಗೆ ಸತಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿ ಪ್ರತಿ ಸಲ ಬೀದರಗೆ ಬಂದಾಗ ನನ್ನನ್ನು ಭೇಟಿ ಆಗುತ್ತಾರೆ ಅಂದರೆ ಸರಿಯಲ್ಲ. ಸುಂದ್ರಮ್ಮ ದಾವಾ ಆಸ್ತಿಯ ಮಾಲೀಕರು ಇದ್ದು ಅವರು ದಾವಾ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿದ ವಿಚಾರ ತಿಳಿದುಕೊಂಡ ನಂತರ ವಾದಿಯ ಮೂಲಕ ಈ ಕೇಸು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಿದರೆ ಸುಂದ್ರಮ್ಮನಿಗೆ ಸಾಕಷ್ಟು ಹಣ ಬರುತ್ತದೆ ಎಂಬ ಉದ್ದೇಶದಿಂದ ಸುಳ್ಳು ಕೇಸು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯ ಬಗ್ಗೆ ಏನೂ ಮಾಹಿತಿ ಇಲ್ಲದೆ ಇದ್ದರೂ ಮತ್ತು ಕೇಸು ಹಾಕುವ ಉದ್ದೇಶ ಇಲ್ಲದೆ ಇದ್ದರೂ ನಾನು ಅವರನ್ನು ಕರೆದುಕೊಂಡು ಬಂದು ಈ ಕೇಸನ್ನು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಅರ್ಧ ಪಾಲು ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ 4, 5 ನೇ ಪ್ರತಿವಾದಿ ಪರ ಶ್ರೀ. ಪಿ. ಡಿ. ಬಿ. ಅವರಿಂದ.</u>

5. ನಾನು ಪಕ್ಕಲವಾಡದಲ್ಲಿ ವಾಸ ಇದ್ದೇನೆ. ನಮ್ಮ ತಂದೆ ಹೆಸರು ನಿಂಗಪ್ಪ. ಅವರು ನನ್ನನ್ನು ದತ್ತಕ್ಕೆ ತೆಗೆದುಕೊಂಡಿದ್ದರು. ನನ್ನ ಹೆತ್ತ ತಂದೆ ಹೆಸರು ಮುಸಲಪ್ಪಾ. ಅವರು ಪಕ್ಕಲವಾಡದಲ್ಲಿ ವಾಸ ಇದ್ದರು. ನಮ್ಮ ಹೆತ್ತ ತಂದೆಗೆ ನಾನು ಮತ್ತು ನಮ್ಮ ಅಣ್ಣಿ ಮೃತ ಶಿರೋಮಣಿ ಅನ್ನುವ ಮಕ್ಕಳು ಇದ್ದೆವು. ನಾನು 1938 ನೇ ಇಸವಿಯಲ್ಲಿ ಹುಟ್ಟಿದ್ದೇನೆ. 1967 ನೇ ಇಸವಿಯಲ್ಲಿ ನಾನು ಸುಮಾರು 29 ವರ್ಷದ ಪ್ರಾಯದವನು ಇದ್ದಾಗ ದತ್ತು ತೆಗೆದುಕೊಂಡಿರುತ್ತಾರೆ. ನನ್ನನ್ನು ದತ್ತು ತೆಗೆದುಕೊಳ್ಳುವಾಗ ಯಾವುದೇ ಕಾರ್ಯಕ್ರಮ ಆಗಿರುವುದಿಲ್ಲ ದತ್ತು ತೆಗೆದುಕೊಂಡಿದ್ದನ್ನು ನೋಂದಣಿ ಮಾಡಿಸಿರುತ್ತಾರೆ. ನನಗೆ ಇಬ್ಬರು ಗಂಡು ಹಾಗೂ ಒಬ್ಬ ಮಗಳು ಇರುತ್ತಾಳೆ. ನನ್ನ ಗಂಡು ಮಕ್ಕಳಿಗೆ ಮದುವೆ ಆಗಿರುತ್ತದೆ ಮಗಳಿಗೆ ಮದುವೆ ಆಗಿಲ್ಲ. ನನಗೆ

ಬೀದರನಲ್ಲಿ ಒಂದು ಮನೆ ಇರುತ್ತದೆ. ಆ ಮನೆ ನಂ. 10–1–130 ಇರುತ್ತದೆ. ಈಗ ನನಗೆ ತೋರಿಸಿದ 2018 ನೇ ಸಾಲಿನ ಮತದಾರರ ಪಟ್ಟಿಯಲ್ಲಿ ಕ್ರಮ ಸಂಖ್ಯೆ. 179 ರಲ್ಲಿ ಇರುವ ಹೆಸರು ವಿವರ ನನಗೆ ಸಂಭಂದಿಸಿರುತ್ತದೆ. ಅದರಲ್ಲಿ ನನ್ನ ವಯಸ್ಸು 79 ವರ್ಷ ಎಂದು ತೋರಿಸಲಾಗಿದೆ ಅಂದರೆ ನಿಜ. ಅದನ್ನು ನಿಡಿ–1 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ 2018 ನೇ ಸಾಲಿನ ಮತದಾರರ ಪಟ್ಟಿಯಲ್ಲಿ ಕ್ರಮ ಸಂಖ್ಯೆ 441 ರಲ್ಲಿ ಇರುವ ಹೆಸರು, ವಿಳಾಸ ನನಗೆ ಸಂಭಂದಿಸಿರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡಿರುವುದರಿಂದ ಅದನ್ನು ನಿಡಿ–2 ಎಂದು ಗುರುಸಲಾಯಿತು. ಅದರಲ್ಲಿ ನನ್ನ ವಯಸ್ಸು 75 ವರ್ಷ ಎಂದು ತೋರಿಸಿರುತ್ತಾರೆ ಅಂದರೆ ನಿಜ. ಆದರೆ ಅದು ಹಳೆಯ ವಿವರ ಇರುತ್ತದೆ. ಅದರಲ್ಲಿ ನನ್ನ ಮನೆ ಸಂಖ್ಯೆ. 10–1–130 ಎಂದು ತೋರಿಸಿಲ್ಲ ಅಂದರೆ ನಿಡಿ–2 ರಲ್ಲಿ ಇರುವ ಮನೆ ಸಂಖ್ಯೆ ಹಳೇಯದ್ದು ಇರುತ್ತದೆ. ಈಗ ನಾನು ಹೇಳಿದ ಸಂಖ್ಯೆ ಹೊಸದ್ದು ಇರುತ್ತದೆ. ನಿಡಿ–1 ಮತ್ತು ನಿಡಿ–2 ರ ಪ್ರಕಾರ 2 ವಿಳಾಸಗಳಲ್ಲಿ ನನ್ನ ಹೆಸರು ಇರುತ್ತದೆ ಅಂದರೆ ನಾನು ಎರಡು ವಿಳಾಸದಲ್ಲಿ ನೋಂದಣೆ ಮಾಡಿಸಿಕೊಂಡಿರುವುದಿಲ್ಲ ಅದು ಸಂಭಂಧಿಸಿದ ಇಲಾಖೆಯವರು ತಪ್ಪು ಮಾಡಿರುತ್ತಾರೆ. ನನ್ನ ಹೆಸರು 2 ಮತದಾರರ ಪಟ್ಟಿಯಲ್ಲಿ ಇರುವ ವಿಷಯ ನನಗೆ ಮೊದಲಿನಿಂದಲೂ ಗೊತ್ತಿದ್ದರೂ ನಾನು ಉದ್ದೇಶಪೂರ್ವಕವಾಗಿ ಒಂದು ಹೆಸರನ್ನು ತೆಗೆದು ಹಾಕಿಲ್ಲ ಅಂದರೆ ಸರಿಯಲ್ಲ.

6. ನನಗೆ ದಾವಾ ಆಸ್ತಿಯ ಸರ್ವೆ. ನಂ. ಮತ್ತು ಅಳತೆ ಗೊತ್ತಿದೆ. ಅದು ಮಿರ್ಜಾಪುರ ಗ್ರಾಮದ ಸರ್ವೆ. ನಂ. 3 ರಲ್ಲಿ ಇರುವ 3 ಎಕರೆ 18 ಗುಂಟೆ ಜಮೀನು ಇರುತ್ತದೆ. ನಮ್ಮ ಮನೆ ನಮ್ಮ ತಂದೆ ನಿಂಗಪ್ಪ ಕೊಟ್ಟಿರುವ ಹೊಲದಲ್ಲಿ ಇರುತ್ತದೆ. ಅಲ್ಲಿಂದ ದಾವಾ ಆಸ್ತಿಗೆ ಹೆಚ್ಚು ಕಡಿಮೆ 3 ಕಿ. ಮೀ. ದೂರ ಆಗುತ್ತದೆ ಈಗ ದಾವಾ ಆಸ್ತಿ ಎಷ್ಟು ಆಳತೆ ಇರುತ್ತದೆ ಎಂದು ಗುತ್ತಿಲ್ಲ. ಆ ಜಮೀನಿನ ಪೈಕಿ ಸರಕಾರವು ಭೂ

ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ಮಾಹಿತಿ ಇಲ್ಲ. ದಾವಾ ಆಸ್ತಿಯಲ್ಲಿ ಬೀದರ ರಿಂಗ್ ರಸ್ತೆ ಹಾದು ಹೋಗಿರುತ್ತದೆ. ಈಗ ದಾವಾ ಆಸ್ತಿ 21 ಎಕರೆ ಮಾತ್ರ ಇರುತ್ತದೆ ಅಂದರೆ ಇರಬಹುದು.

7. ನಾನು ಬಂಡೆಪ್ಪ ರವರನ್ನು ನೋಡಿರುತ್ತೇನೆ. ಅವರಿಗೆ 3 ಜನ ಮಕ್ಕಳು ಅವರ ಪೈಕಿ ಒಬ್ಬ ಮದುವೆ ಆಗದೆ ತೀರಿಕೊಂಡಿರುತ್ತಾರೆ. ಇನ್ನೂ ಇಬ್ಬರು ಸಹ ತೀರಿಕೊಂಡಿರುತ್ತಾರೆ. ಬಂಡಪ್ಪ ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಒಬ್ಬ ಮಗಳು ಕಲ್ಲಮ್ಮನನ್ನು ಹಮೀಲಾಪುರಕ್ಕೆ ಕೊಟ್ಟಿರುತ್ತಾರೆ. ಇನ್ನೊಬ್ಬ ಮಗಳನ್ನು ಬೆಳ್ಳೂರಿಗೆ ಕೊಟ್ಟಿರುತ್ತಾರೆ. ಅವರಿಬ್ಬರೂ ತೀರಿಕೊಂಡಿರುತ್ತಾರೆ. ಬಂಡೆಪ್ಪ ಅವರ ಇಬ್ಬರು ಗಂಡು ಮಕ್ಕಳ ಹೆಸರು ಗಣಪತಿ ಮತ್ತು ಸಂಬಾಜಿರಾವ್. ಹೈದ್ರಾಬಾದನ ಸ್ಟ್ಯಾನ್ ಲೇ ಖಾಸಗಿ ಶಾಲೆಯಲ್ಲಿ ಸಂಬಾಜಿ ಅವರು ಕೆಲಸ ಮಾಡುತ್ತಿದ್ದರು. ಸಂಬಾಜಿ ಅವರು 1956 ನೇ ಇಸವಿಯಲ್ಲಿ ರಾಜ್ಯಗಳ ಪುನರ್ ವಿಂಗಡಣೆ ಆಗುವ ಮೊದಲಿನಿಂದಲೂ ಸರಕಾರಿ ನೌಕರಿಯಲ್ಲಿ ಇದ್ದರು ಅಂದರೆ ಸರಿಯಲ್ಲ. 1956 ನೇ ಇಸವಿಯಲ್ಲಿ ಅವರು ಆಂಧ್ರ ಪ್ರದೇಶದ ಸರಕಾರಿ ನೌಕರರು ಆದರು ಅಂದರೆ ಸುಳ್ಳು. ಸಂಬಾಜಿ ಅವರು ಹೈದ್ರಾಬಾದನಲ್ಲಿ ವಿಧ್ಯಾಭ್ಯಾಸ ಮಾಡಿದ್ದು ಮತ್ತು ಅವರಿಗೆ ಅಲ್ಲಿ ನೌಕರಿ ಸಿಕ್ಕಿತ್ತು ಅಂದರೆ ನಿಜ. ಅವರು ಹೈದ್ರಾಬಾದನಲ್ಲಿ ಮನೆ ಖರೀದಿಸಿದ್ದರು ಅಂದರೆ ನಿಜ. ಅವರ ಮನೆ ಆಸೀಫ್ ನಗರದಲ್ಲಿ ಇತ್ತು ಅಂದರೆ ಗೊತ್ತಿಲ್ಲ. ನಾನು ಆ ಮನೆಗೆ ಹೋಗಿದ್ದೇನೆ. ನಾಮಪಲ್ಲಿ ರೈಲ್ವೆ ಸ್ಟೇಷನ್ ಹಿಂಭಾಗದಲ್ಲಿ ಅವರ ಮನೆ ಇತ್ತು ಅಂದರೆ ಅದು ಬಾಡಿಗೆ ಮನೆ ಇತ್ತು. ಸಂಬಾಜಿ ಅವರು ಹೈದ್ರಾಬಾದನಲ್ಲಿ ತೀರಿಕೊಂಡರು ಅಂದರೆ ನಿಜ. ಅವರು 1956 ನೇ ಇಸವಿಯಿಂದ ಖಾಯಂ ಆಗಿ ಹೈದ್ರಾಬಾದನಲ್ಲಿ ವಾಸ ಇರುತ್ತಿದ್ದರು ಮತ್ತು ಅಲ್ಲಿಯೇ ತೀರಿಕೊಂಡರು ಅಂದರೆ ಸರಿಯಲ್ಲ. ಅವರು ಆಗಾಗ ಬೀದರಗೆ ಬರುತ್ತಿದ್ದರು.

8. ಗಣಪತಿ ರೆವಿನ್ಯೂ ಇಲಾಖೆಯಲ್ಲಿ ಬೀದರ, ಔರಾದನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಮನೆ ಈಡಗೇರಿಯಲ್ಲಿ ಇರುತ್ತದೆ. ಅವರ ಮನೆಯು ದಾವಾ ಆಸ್ತಿಗೆ ಸಮೀಪ ಇತ್ತು ಅಂದರೆ ಸರಿಯಲ್ಲ. ಅವರ ಮನೆಯಿಂದ ಹೊಲಕ್ಕೆ 3 ಕಿ. ಮೀಐ. ದೂರ ಆಗುತ್ತದೆ. ಆ ಹೊಲವನ್ನು ಗಣಪತಿ ಮತ್ತು ಅವರ ಹೆಂಡತಿ ಸುಂದ್ರಮ್ಮಾ ಸಾಗುವಳಿ ಮಾಡುತ್ತಿದ್ದರು ಅಂದರೆ ಅವರಿಗಿಂತ ಮೊದಲು ಆ ಹೊಲವನ್ನು ಬಂಡೆಪ್ಪ ಸಾಗುವಳಿ ಮಾಡುತ್ತಿದ್ದನು ಆನಂತರ ಸಂಬಾಜಿ ಸುಪರ್ ವಿಜನ್ ಮಾಡುತ್ತಿದ್ದರು ಮತ್ತು ಖರ್ಚು ವೆಚ್ಚವನ್ನು ಆತನೇ ಮಾಡುತ್ತಿದ್ದನು.

9. ಸರ್ವೆ. ನಂ. 3 ರ ಮೂಲಕ ಮಾಲೀಕರು ಯಾರು ಇದ್ದರು ಎಂದು ಗೊತ್ತಿಲ್ಲ. ಬಂಡೆಪ್ಪ ದಾವಾ ಆಸ್ತಿ ಅಲ್ಲದೆ ಮಲ್ಕಾಪುರದಲ್ಲಿ ಇದ್ದ ಸರ್ವೆ. ನಂ. 88 ಅನ್ನು ನಮ್ಮ ತಂದೆ ಒಟ್ಟಿಗೆ ಸಾಗುವಳಿ ಮಾಡುತ್ತಿದ್ದರು. ಮಲ್ಕಾಪುರದ ಜಮೀನಿನಲ್ಲಿ ಹುಲ್ಲು ಬೆಳೆದು ಮಾರಾಟ ಮಾಡುತ್ತಿದ್ದರು. ಸರ್ವೆ. ನಂ. 88 ಪಟ್ಟಾ ಭೂಮಿ ಇತ್ತು. ಆ ಜಮೀನು ನಮ್ಮ ತಂದೆ ನಿಂಗಪ್ಪ ಮತ್ತು ಬಂಡೆಪ್ಪ ಅವರ ಹೆಂಡತಿ ಸಂಗಮ್ಮನ ಹೆಸರಿನಲ್ಲಿ ಇತ್ತು. ಸದರಿ ಜಮೀನು ಸಂಗಮ್ಮನಗೆ ಅವರ ತಂದೆ ತಾಯಿ ಕೊಟ್ಟಿದ್ದರು ಅಂದರೆ ಸರಿಯಲ್ಲ. ಆ ಜಮೀನು ಒಟ್ಟು 17 ಎಕರೆ 21 ಗುಂಟೆ ಇತ್ತು. ಸದರಿ ಸಂಗಮ್ಮ ಗಣಪತಿ ಮತ್ತು ಸಂಬಾಜಿ ಅವರ ತಾಯಿ ಇದ್ದರು ಅಂದರೆ ನಿಜ. ಸಂಗಮ್ಮ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. 1983 ನೇ ಇವಿಸಯಲ್ಲಿ ಸಂಗಮ್ಮ ತೀರಿಕೊಂಡ ನಂತರ ಆ ಜಮೀನನ್ನು ಗಣಪತಿ ಮತ್ತು ಸಂಬಾಜಿ ಅವರ ಹೆಸರಿಗೆ ಆಗಿರುತ್ತದೆ ಅಂದರೆ ನಿಜ. ಅವರಿಬ್ಬರೂ ಸೇರಿ 1987 ನೇ ಇಸವಿಯಲ್ಲಿ ಆ ಜಮೀನು ಮಾರಿದ್ದರು ಅಂದರೆ ಗೊತ್ತಿಲ್ಲ. ಆ ಜಮೀನಿಗೂ ಬಂಡಪ್ಪನಿಗೂ ಯಾವುದೇ ಸಂಭಂದ ಇರಲಿಲ್ಲ ಅಂದರೆ ಸುಳ್ಳು. ಆ ಜಮೀನು ಬಂಡೆಪ್ಪ ಅವರ ಪಿತ್ರಾರ್ಜಿತ ಆಸ್ತಿ ಇರಲ್ಲಿಲ್ಲ ಅಂದರೆ ನಿಜ.

10. ಸಂಬಾಜಿ ಅವರಿಗೆ ಬೀದರನಲ್ಲಿ ಮನೆ ಇರಲಿಲ್ಲ. ಸಂಬಾಜಿ ಹೈದ್ರಾಬಾದನಲ್ಲಿ ವಾಸ ಇರುವುದರಿಂದ ತನಗಿದ್ದ ಮನೆಯನ್ನು ಗಣಪತಿ ಅವರ ಹೆಸರಿಗೆ ನೋಂದಾಯಿತ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಅಂದರೆ ಗೊತ್ತಿಲ್ಲ. ಸಂಬಾಜಿ ಮತ್ತು ಗಣಪತಿ ಅವರು 1956 ನೇ ಇಸವಿಗಿಂತ ಮೊದಲೇ ಬೇರೆ ಬೇರೆ ಆಗಿದ್ದರು ಅಂದರೆ ಸುಳ್ಳು. ಅವರಿಗೆ ಹಿರಿಯರಿಂದ ಬಂದ 2 ಮನೆಗಳು ಮಾತ್ರ ಇದ್ದವು ಅಂದರೆ ಸರಿಯಲ್ಲ. ಆ ಮನೆಗಳನ್ನು ಅವರು ಒಂದೊಂದು ಪಾಲು ಮಾಡಿಕೊಂಡಿದ್ದರು ಅಂದರೆ ಸರಿಯಲ್ಲ. ಆ ರೀತಿ ಸಂಬಾಜಿ ಪಾಲಿಗೆ ಬಂದ ಮನೆಯನ್ನು ಗಣಪತಿಗೆ ಮಾರಿರುತ್ತಾರೆ ಅಂದರೆ ಸುಳ್ಳು.

11. ಬಂಡೆಪ್ಪ 1959 ನೇ ಇಸವಿಯಲ್ಲಿ ತೀರಿಕೊಂಡಿದ್ದರು. ಆಗ ನನಗೆ 22 ವರ್ಷ ಪ್ರಾಯ ಆಗಿತ್ತು ಮತ್ತು ಪೋಲೀಸ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆ. ಸರ್ವೆ. ನಂ. 3 ಅನ್ನು ಬಂಡೆಪ್ಪ ಅವರು ಸಾಗುವಳಿ ಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಅಂದರೆ ಅವರು ಸಾಗುವಳಿ ಮಾಡುತ್ತಿದ್ದನ್ನು ನೋಡಿರುತ್ತೇನೆ. ಆದರೆ ದಾಖಲೆ ಇರುವುದು ಗೊತ್ತಿಲ್ಲ. ಆ ಜಮೀನನ್ನು ಗಣಪತಿ ಮತ್ತು ಸುಂದ್ರಮ್ಮಾ ಮಾತ್ರ ಕಾಸ್ತ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಆ ಜಮೀನಿನ ಪಹಣಿಯಲ್ಲಿ ಗಣಪತಿ ಹೆಸರು ಇತ್ತು ಅಂದರೆ ಅವರು ರೆವಿನ್ಯೂ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ಅವರ ಹೆಸರಲ್ಲಿ ಮಾಡಿಕೊಂಡಿರಬಹುದು. ದಾಖಲೆಗಳಲ್ಲಿ ಗಣಪತಿ ಅವರ ಹೆಸರು ಮಾತ್ರ ಇದ್ದುದ್ದರಿಂದ ಸಂಬಾಜಿ ಅವರು ಆ ಎಂಟ್ರಿಯನ್ನು ಪ್ರಶ್ನಿಸಿರುತ್ತಾರೆ ಎಂದು ಗೊತ್ತಿಲ್ಲ. ಸಂಬಾಜಿ ಅವರು ಡಿ.ಸಿ. ಆಫೀಸನಲ್ಲಿ ತನ್ನ ಹೆಸರನ್ನು ಪಹಣಿಯಲ್ಲಿ ಸೇರಿಸಲು ಕೇಸು ಮಾಡಿದ್ದರು ಅಂದರೆ ಗೊತ್ತಿಲ್ಲ.

12. ಸರ್ವೆ. ನಂ. 3 ರ ಪೈಕಿ ಸ್ವಲ್ಪ ಜಮೀನು ಭೂ ಸ್ವಾಧೀನ ಆಗಿತ್ತು ಅಂದರೆ ಇರಬಹುದು. ಆ ಭೂ ಸ್ವಾಧೀನಕ್ಕೆ ಸಂಭಂಧಿಸಿದ ಪರಿಹಾರವನ್ನು ತಮಗೂ

ನೀಡಬೇಕು ಎಂದು ವಾದಿ ಮತ್ತು ಅವರ ತಾಯಿ ಅರ್ಜಿ ಸಲ್ಲಿಸಿದ್ದರು ಅಂದರೆ ಗೊತ್ತಿಲ್ಲ. ಆ ಜಮೀನು ಗಣಪತಿ ಮತ್ತು ಸುಂದ್ರಮ್ಮ ಅವರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರು ಆಗಿದ್ದರಿಂದ ಪರಿಹಾರ ಹಣದಲ್ಲಿ ಪಾಲು ಕೊಡಲು ಬರುವುದಿಲ್ಲ ಎಂದು ಅವರ ಅರ್ಜಿ ತಿರಸ್ಕಾರ ಆಗಿರುತ್ತದೆ ಅಂದರೆ ಗೊತ್ತಿಲ್ಲ.

13. ಗಣಪತಿ ಭೂ ನ್ಯಾಯ ಮಂಡಳಿಯಲ್ಲಿ ಗೇಣಿ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದರು ಅಂದರೆ ಗೊತ್ತಿಲ್ಲ. ಆ ಅರ್ಜಿ ಪೆಂಡಿಂಗ್ ಇರುವಾಗ ಗಣಪತಿ ತೀರಿಕೊಂಡಿದ್ದರಿಂದ ಸುಂದ್ರಮ್ಮಾ ಪಾರ್ಟಿ ಆಗಿದ್ದರು ಅಂದರೆ ಗೊತ್ತಿಲ್ಲ. ಆ ಕೇಸು ಭೂ ನ್ಯಾಯ ಮಂಡಳಿಯಲ್ಲಿ ಪೆಂಡಿಂಗ್ ಇದ್ದಾಗ ಸಂಬಾಜಿ ಸಹ ತನ್ನನ್ನು ಪಾರ್ಟಿ ಮಾಡಬೇಕು ಎಂದು ಅರ್ಜಿ ಕೊಟ್ಟಿದ್ದರು ಅಂದರೆ ಗೊತ್ತಿಲ್ಲ. ಆ ಆರ್ಜಿಯನ್ನು ವಜಾ ಮಾಡಿರುತ್ತಾರೆ ಅಂದರೆ ಗೊತ್ತಿಲ್ಲ. ಅವರು ಆ ಆದೇಶದ ವಿರುದ್ದ ಅಪೀಲು ಸಲ್ಲಿಸಿಲ್ಲ ಅಂದರೆ ಗೊತ್ತಿಲ್ಲ.

14. ಮೊದಲು ವಾದಿ ಹೈದ್ರಾಬಾದನಲ್ಲಿ ಇರುತ್ತಿದ್ದರು, ಈಗ ಬೆಂಗಳೂರಿನಲ್ಲಿ ಇರುತ್ತಾರೆ. ಅವರು ಯಾವತ್ತು ಬೀದರನಲ್ಲಿ ವಾಸ ಇರಲಿಲ್ಲ ಖಾಯಂ ಆಗಿ ಹೈದ್ರಾಬಾದನಲ್ಲಿ ವಾಸ ಇದ್ದರು ಅಂದರೆ, ಆಗಾಗ ಬೀದರಗೆ ಬರುತ್ತಾರೆ ಬೀದರನಲ್ಲಿ ಅವರ ಗಂಡನ ಮನೆ ಇರುತ್ತದೆ. ಸಂಬಾಜಿ ಅವರು ತೀರಿಕೊಂಡ ನಂತರ ವಾದಿ ಮತ್ತು ಅವರ ತಾಯಿ ದಾವಾ ಆಸ್ತಿಯ ಗೇಣಿದಾರರು ಆದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗಣಪತಿ ಭೂ ನ್ಯಾಯ ಮಂಡಳಿಯಲ್ಲಿ ಸಲ್ಲಿಸಿದ್ದ ಫಾರ್ಮ ನಂ. 7 ರಲ್ಲಿ ತನ್ನ ಹೆಂಡತಿ ಮತ್ತು ಮಕ್ಕಳು ಮಾತ್ರ ಇರುತ್ತಾರೆ ಎಂದು ನಮೂದಿಸಿರುತ್ತಾರೆ ಅಂದರೆ ಗೊತ್ತಿಲ್ಲ. ಆ ಜಮೀನಿನ ಗೇಣಿಯನ್ನು ಸುಂದ್ರಮ್ಮನಿಗೆ ಮಂಜೂರು ಮಾಡಿದ್ದರಿಂದ ಆಕೆ ಸಂಪೂರ್ಣ ಮಾಲೀಕ ಮತ್ತು ಕಬ್ಜೆದಾರಳು ಇರುತ್ತಾಳೆ ಅಂದರೆ ಸರಿಯಲ್ಲ.

15. ಪ್ರತಿವಾದಿ ಸುಂದ್ರಮ್ಮಾ ದಾವಾ ಆಸ್ತಿಯ ಪೈಕಿ 11 ಎಕರೆ ಜಮೀನನ್ನು ನೋಂದಾಯಿತ ಕ್ರಯ ಕರಾರು ಪತ್ರದ ಮೂಲಕ 4 ನೇ ಪ್ರತಿವಾದಿಗೆ ಮಾರಾಟ ಮಾಡಿ ಕಬ್ಜೆಯನ್ನು ಕೊಟ್ಟಿರುತ್ತಾರೆ ಅಂದರೆ ಗೊತ್ತಿಲ್ಲ. ಉಳಿದ 10 ಎಕರೆ ಜಮೀನನ್ನು ನೋಂದಾಯಿತ ಕ್ರಯ ಕರಾರು ಪತ್ರದ ಮೂಲಕ 5 ನೇ ಪ್ರತಿವಾದಿಗೆ ಮಾರಾಟ ಮಾಡಿ ಕಬ್ಜೆಯನ್ನು ಕೊಟ್ಟಿರುತ್ತಾರೆ ಅಂದರೆ ಗೊತ್ತಿಲ್ಲ. ಅವರಿಬ್ಬರೂ ಸದರಿ ಜಮೀನುಗಳ ಕಬ್ಜೆಯಲ್ಲಿ ಇದ್ದು ಕಾಸ್ತ ಮಾಡುತ್ತಿದ್ದಾರೆ ಅಂದರೆ ಗೊತ್ತಿಲ್ಲ. ಈ ದಾವೆ ಪೆಂಡಿಂಗ್ ಇದ್ದುದರಿಂದ ಸುಂದ್ರಮ್ಮ ಅವರಿಗೆ ನೋಂದಾಯಿತ ಕ್ರಯ ಪತ್ರ ಮಾಡಿಕೊಟ್ಟಿಲ್ಲ ಅಂದರೆ ಗೊತ್ತಿಲ್ಲ. ದಾವಾ ಆಸ್ತಿಗೂ ಸಂಬಾಜಿಗೂ, ಅವರ ಹೆಂಡತಿ ಮಕ್ಕಳಿಗೂ ಯಾವುದೇ ಸಂಭಂದ ಇರುವುದಿಲ್ಲ ಮತ್ತು ಅವರು ಯಾವತ್ತೂ ಕಾಸ್ತ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ವಾದಿ ನನಗೆ ಸಂಭಂಧಿಕರಾಗಬೇಕು ಅಂದರೆ, ದೂರದ ಸಂಭಂಧಿ ಇರುತ್ತಾರೆ. ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತ ಲೇಖನದ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಮೇಲೆ ಬೆರಳಚ್ಚು ಮಾಡಲಾಗಿದೆ.)

ಓ ಹೆ ಕೆ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಜಡ್ಜ ಮತ್ತು ಸಿ.ಜೆ.ಎಮ್,
ಬೀದರ.